ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್**

**ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ**

ಸಂಖ್ಯೆ : ಗ್ರಾಅಪ/ರಾನೀನೈಮಿ/ಎಸ್‌ಬಿಎ/85/2012-13 ದಿನಾಂಕ :18.03.2014

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಜಿಲ್ಲಾ ಪಂಚಾಯತ್‌ಗಳು,

ಬೆಂಗಳೂರು ಗ್ರಾಮಾಂತರ/ಚಿಕ್ಕಬಳ್ಳಾಪುರ/ಚಿತ್ರದುರ್ಗಾ/ಕೋಲಾರ/

ಉತ್ತರ ಕನ್ನಡ/ರಾಯಚೂರು/ಚಿಕ್ಕಮಗಳೂರು/ಗದಗ/ಬೀದರ್ ಮತ್ತು ರಾಮನಗರ

**ಮಾನ್ಯರೆ,**

**ವಿಷಯ:** ನಿರ್ಮಲ ಭಾರತ ಅಭಿಯಾನದಡಿ ದಿನಾಂಕ 20.3.2014ರಿಂದ ಸಾಮಾಜಿಕ ಪರಿಶೋಧನೆ ನಡೆಸುವ ಕುರಿತು.

**ಉಲ್ಲೇಖ** 1) ದಿನಾಂಕ 7.3.2014ರಂದು ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ತಿಳಿಸಿರುವಂತೆ

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಮಲ ಭಾರತ ಅಭಿಯಾನ ಯೋಜನೆಯಡಿ 2013-14ನೇ ಸಾಲಿನಲ್ಲಿ ಪೆಬ್ರವರಿ-2014ರ ಅಂತ್ಯದವರೆಗೆ ಸಾಧಿಸಿರುವ ವೈಯಕ್ತಿಕ ಗೃಹ ಶೌಚಾಲಯಗಳ ಪ್ರಗತಿಯನ್ನು ಭೌತಿಕ ಪರಿಶೀಲನೆ ಮಾಡಲು ಸಾಮಾಜಿಕ ಪರಿಶೋಧನೆ ಕಾರ್ಯ ನಡೆಸುವುದಾಗಿ ಉಲ್ಲೇಖ (1)ರಂತೆ ಜಿಲ್ಲೆಗಳಿಗೆ ತಿಳಿಸಲಾಗಿದ್ದು, ಮಾನ್ಯ ನಿರ್ದೇಶಕರು ಸಾಮಾಜಿಕ ಪರಿಶೋಧನೆ ಕಾರ್ಯವನ್ನು ಮಾರ್ಚ್-2014ರ ಮಾಹೆಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಿರುತ್ತಾರೆ.

ಈ ಹಿನ್ನೆಯಲ್ಲಿ ತಮ್ಮ ಜಿಲ್ಲೆಗಳಲ್ಲಿ **ದಿನಾಂಕ 20.03.2014ರಿಂದ ಸಾಮಾಜಿಕ ಪರಿಶೋಧನೆ ಕಾರ್ಯ ನಡೆಯಲಿದೆ, ಆದ್ದರಿಂದ ಸಂಬಂಧಿಸಿದ ಸಾಮಾಜಿಕ ಪರಿಶೋಧಕರಿಗೆ ದಿನಾಂಕ 19.03.2014ರ ಸಂಜೆ 5.00 ಗಂಟೆಯ ಒಳಗಾಗಿ ಗ್ರಾಮ ಪಂಚಾಯಿತಿವಾರು ಫಲಾನುಭವಿಗಳ ಪಟ್ಟಿಯನ್ನು ನೀಡಿ, ಸಾಮಾಜಿಕ ಪರಿಶೋಧನೆ ನಡೆಸಲು ಅಗತ್ಯಕ್ರಮ ವಹಿಸುವಂತೆ ತಿಳಿಸಲು ಈ ಮೂಲಕ ನಿರ್ದೇಶಿತಳಾಗಿರುತ್ತೇನೆ**

**ಸೂಚನೆ: ಮೂರು ದಿನಗಳ ಒಳಗಾಗಿ ಸಾಮಾಜಿಕ ಪರಿಶೋಧನೆ ಕಾರ್ಯವನ್ನು ಪೂರ್ಣಗೊಳಿಸಿ, ಕ್ರೂಢಿಕೃತ ಮಾಹಿತಿಯನ್ನು ತಾಲೂಕು ಹಂತದಲ್ಲಿ ಪಂಚತಂತ್ರ ವೆಬ್‌ಸೈಟ್‌ನಲ್ಲಿ ಎಂಟ್ರಿ ಮಾಡಬೇಕು.**

ತಮ್ಮ ವಿಶ್ವಾಸಿ

ಮಿಷನ್ ನಿರ್ದೇಶಕರ ಪರವಾಗಿ

ರಾಜ್ಯ ನೀರು & ನೈರ್ಮಲ್ಯ ಮಿಷನ್ ಹಾಗೂ

ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು

ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:-**

1. ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತಕಾರ್ಯದರ್ಶಿಯವರ ಮಾಹಿತಿಗಾಗಿ.
2. ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ,ಗ್ರಾ.ಅ.&ಪಂ,ರಾಜ್ ಇಲಾಖೆ ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.

ದೂರವಾಣಿ ಸಂ.22221861-62 : - ಫ್ಯಾಕ್ಸ್ :-22221862 E-mail : wsrdpr@gmail.com.